ತಮ್ಮ ಕೈಯಿಂದಲೇ ಠಾಕೂರರ ಭಾವಚಿತ್ರಕ್ಕೆ ಪೂಜೆ ಮಾಡಿ ಅನ್ನ ನೈವೇದ್ಯವನ್ನು ಮಾಡಿ ಹೇಳಿದ್ದರು: ''ಠಾಕೂರರಿಗೆ ನೈವೇದ್ಯ ನೀಡುವಾಗ ಅವರು ಅದನ್ನು ಸ್ವೀಕರಿಸಿದ್ದನ್ನು ನೋಡಿದೆ.'' ಈ ರೀತಿ ಅವರು ತಮ್ಮ 'ಅನ್ನಪೂರ್ಣಾ-ಸ್ವರೂಪ'ವನ್ನು ಪ್ರಕಟ ಪಡಿಸಿ, ಈ ಕಾಯಸ್ಥ ಕುಟುಂಬದ ಭಕ್ತರಿಗೆ ಠಾಕೂರರಿಗೆ ಅನ್ನ-ನೈವೇದ್ಯ ಮಾಡುವ ಅಧಿಕಾರವನ್ನು ನೀಡಿದರು. ಅವರ ನಿರ್ದೇಶನದಂತೆ, ಹಾಗೂ ಅಪಾರ ಆಶೀರ್ವಾದದಿಂದ ಈ ಪೂಜೆಯ ಇಂದಿಗೂ ದತ್ತ ಕುಟುಂಬದಲ್ಲಿ ನಡೆದುಕೊಂಡು ಬರುತ್ತಿದೆ. ಈ ಎಲ್ಲ ವಿಷಯಗಳನ್ನು ನನ್ನ ತಂದೆಯವರು ತಮ್ಮ ದಿನಚರಿ ಪುಸ್ತಕ ದಲ್ಲಿ ಬರೆದಿಟ್ಟಿದ್ದನ್ನು ಕಾಣಬಹುದು.

ಅಮೆರಿಕಾದ ಹಾಲಿವುಡ್ ಕೇಂದ್ರದ ಹಿಂದಿನ ಅಧ್ಯಕ್ಷರಾಗಿದ್ದ ಸ್ವಾಮಿ ಪ್ರಭವಾನಂದ ಮಹಾರಾಜ್ ಒಂದು ಪತ್ರದಲ್ಲಿ ನನಗೆ ಹೀಗೆ ಬರೆದಿದ್ದರು: 'ಶ್ರೀಮಾತೆಯವರನ್ನು ಕುರಿತು ಒಂದು ವಿಷಯ ತಿಳಿಸುತ್ತೇನೆ. ಪೂಜ್ಯ ಹರಿ ಮಹಾರಾಜರಿಂದ (ಸ್ವಾಮಿ ತುರೀಯಾನಂದರು) ಕೇಳಿ ತಿಳಿದಿದ್ದೆ, ಶ್ರೀಮಾತೆಯವರು ಯಾವಾಗಲೂ ಸಮಾಧಿ ಅವಸ್ಥೆಯಲ್ಲೇ ಇರುತ್ತಿದ್ದರು; ಹಾಗಿದ್ದೂ ಅವರು ಬಾಹ್ಯ ಚಟುವಟಿಕೆಗಳನ್ನೆಲ್ಲ ಮಾಡುತ್ತಿದ್ದರು. ಅವರ ಮನಸ್ಸು ವಿಶುದ್ಧ ಚಕ್ರದಿಂದ ಕೆಳಕ್ಕೆ ಇಳಿಯುತ್ತಿರಲಿಲ್ಲ. ಇದೇ ವಿಶೇಷವಾಗಿ ಆಶ್ಚರ್ಯದ ಸಂಗತಿ!'

ಒಂದು ದಿನ ಬಾಬುರಾಮ್ ಮಹಾರಾಜರು (ಸ್ವಾಮಿ ಪ್ರೇಮಾನಂದರು) ಬಾಗ್‌ಬಜಾರಿನಲ್ಲಿರುವ 'ಶ್ರೀಮಾತೆಯವರ ಮನೆ'ಗೆ ('ಉದ್ಬೋಧನ') ಬಂದರು. ಅವರೊಂದಿಗೆ ರಾಜಾ ಮಹಾರಾಜರ (ಸ್ವಾಮಿ ಬ್ರಹ್ಮಾನಂದರು) ಸೇವಕರಾದ ಸ್ವಾಮಿ ವರದಾನಂದರೂ ಇದ್ದರು. 'ಶ್ರೀಮಾತೆಯವರ ಮನೆ' ಯನ್ನು ಪ್ರವೇಶಿಸುವ ಮೊದಲು ಬಾಬುರಾಮ್ ಮಹಾರಾಜರು ಹೊಸ್ತಿಲಿಗೆ ತಲೆ ಮುಟ್ಟಿಸಿ ಪ್ರಣಾಮ ಮಾಡಿದರು. ವರದಾನಂದ ಸ್ವಾಮಿಯವರಿಗೂ ಹಾಗೆ ಮಾಡಲು ಅವರು ಹೇಳಿದರು. ಸ್ವಾಮಿ ವರದಾನಂದರು ಹಿಂದೆ ಮುಂದೆ ನೋಡುತ್ತಿದ್ದುದನ್ನು ನೋಡಿ ಬಾಬುರಾಮ ಮಹಾರಾಜರು ಹೇಳಿದರು: ''ಅರೇ, ಹುಡುಗ-ಮೇಲೆ ಯಾರಿದ್ದಾರೆ ಗೊತ್ತೆ? ಈ ಬಾರಿ ಅವರು ಎರಡು ಕೈಗಳನ್ನು ಹಾಗೂ ಮುಂಡಮಾಲಾ ಇವನ್ನು ಬಿಟ್ಟು ಬಂದಿದ್ದಾರೆ-ಹಾಗಾಗಿ ನಿನಗೆ ಗೊತ್ತಾಗುತ್ತಿಲ್ಲ!''

ಬಾಲ್ಯಕಾಲದಲ್ಲಿ ನನ್ನ ತಂದೆ ಹಾಗೂ ತಾಯಿಯವ ರೊಂದಿಗೆ 'ಶ್ರೀಮಾತೆಯವರ ಮನೆ'ಗೆ ಹೋಗಿ, ಶ್ರೀಮಾತೆ ಯವರ ದರ್ಶನ ಹಾಗೂ ಪಾದಸ್ಪರ್ಶ ಮಾಡುವ ಸೌಭಾಗ್ಯ ನನಗೆ ೨-೩ ಬಾರಿ ದೊರಕಿತ್ತು. ಒಂದು ಸಲ ನಾನು 'ಶ್ರೀಮಾತೆ ಯವರ ಮನೆ'ಯಲ್ಲಿ ಕಲ್ಲಿನ ಮೆಟ್ಟಿಲ ಮೂಲಕ ಮೇಲಂತಸ್ತಿಗೆ ಹೋಗಿ, ಎಡಭಾಗದ ಕೋಣೆಯಲ್ಲಿ ನನ್ನ ತಾಯಿಯ ಬಳಿ ಕುಳಿತು, ಉಳಿದ ಭಕ್ತೆಯರೊಂದಿಗೆ ಪ್ರಸಾದ ಸ್ವೀಕರಿಸಿದ್ದು ನನಗೆ ನೆನಪಿದೆ. ಪ್ರಸಾದ ತಿನ್ನುವುದು ಮುಗಿಯುತ್ತ ಬಂದಿತ್ತು. ಹಠಾತ್ತನೆ ಶ್ರೀಮಾತೆಯವರು ಒಂದು ಸಣ್ಣ ತಟ್ಟೆಯಲ್ಲಿ ಸಂದೇಶ (ಸಿಹಿತಿಂಡಿ)ದೊಂದಿಗೆ ಕೋಣೆಯೊಳಕ್ಕೆ ಬಂದು, ಎಲ್ಲರ ಎಲೆಗೆ ಸಂದೇಶವನ್ನು ವಿತರಿಸಿ, ಎಲ್ಲರನ್ನೂ ಧನ್ಯರನ್ನಾಗಿಸಿದರು,

ಸ್ವಾಮಿ ಅಪೂರ್ವಾನಂದರಿಂದ ಕೇಳಿದ್ದೆ : ಶ್ರೀಮಾತೆ ಯವರು ಕಾಶಿಯಲ್ಲಿ 'ಲಕ್ಷ್ಮೀ ನಿವಾಸ'ದಲ್ಲಿದ್ದಾಗ, ಒಂದು ದಿನ ಬೆಳಗಿನ ಹೊತ್ತು ತಮ್ಮದೇ ಒಂದು ಫೋಟೋವನ್ನು ಕೈಯಲ್ಲಿ ಹಿಡಿದುಕೊಂಡು ಮೇಲಂತಸ್ತಿನಿಂದ ಕೆಳಗೆ ಇಳಿದುಬಂದಿದ್ದರು. ಬಳಿಕ ಹೂವಿನ ತೋಟದಿಂದ ಸ್ವಲ್ಪ ಹೂಗಳನ್ನು ಆರಿಸಿ ತಮ್ಮ ಸೆರಗಿನಲ್ಲಿ ಕಟ್ಟಿಕೊಂಡರು. 'ಲಕ್ಷ್ಮೀನಿವಾಸ'ದಿಂದ ಅದ್ವೈತ ಆಶ್ರಮಕ್ಕೆ ಹೋಗಿ, ತಮ್ಮ ಫೋಟೋವನ್ನು ಅಲ್ಲಿನ ದೇವಾಲಯ ದಲ್ಲಿದ್ದ ಶ್ರೀರಾಮಕೃಷ್ಣರ ಫೋಟೋದ ಬಳಿಯಲ್ಲಿ ಇಟ್ಟು, ಎರಡೂ ಫೋಟೋಗಳಿಗೆ ಹೂಗಳನ್ನು ಅರ್ಪಿಸಿ ಪ್ರಣಾಮ ಮಾಡಿದರು. ಬಳಿಕ ಮಹಾಪುರುಷ ಮಹಾರಾಜರನ್ನು (ಸ್ವಾಮಿ ಶಿವಾನಂದರು) ಕರೆದು ಶ್ರೀಮಾತೆ ಹೇಳಿದರು: ''(ತಮ್ಮ ಫೋಟೋ ವನ್ನು ತೋರಿಸಿ) ಈ ಚಿತ್ರಕ್ಕೂ ಪ್ರತಿದಿನ ಎರಡು ಹೂಗಳನ್ನು ನೀಡು.'' ಮುಂದೆ ಮಹಾಪುರುಷ ಮಹಾರಾಜರ ಸೇವಕರಲ್ಲಿ ಒಬ್ಬರಾಗಿದ್ದ ಸ್ವಾಮಿ ಅಪೂರ್ವಾನಂದರು ಮಹಾಪುರುಷ ಮಹಾ ರಾಜರಿಂದಲೇ ಈ ಘಟನೆಯನ್ನು ಕೇಳಿದ್ದರು.

೧೯೨೦ರ ಜುಲೈ ೨೧ರಂದು ರಾತ್ರಿ ಒಂದೂವರೆ ಗಂಟೆಗೆ ಶ್ರೀಮಾತೆ ಇಹಲೋಕವನ್ನು ತ್ಯಜಿಸಿದರು. ಸ್ವಲ್ಪ ಹೊತ್ತಿನಲ್ಲೇ ಕೃಷ್ಣಲಾಲ್ ಮಹಾರಾಜ್ (ಸ್ವಾಮಿ ಧೀರಾನಂದರು) ಈ ವಿಷಯವನ್ನು ನನ್ನ ತಂದೆ ಕಿರಣಚಂದ್ರರಿಗೆ ತಿಳಿಸಲು 'ಲಕ್ಷ್ಮೀ ನಿವಾಸ'ಕ್ಕೆ ಬಂದರು. ಆಗ ಕಿರಣಚಂದ್ರರು ಅತ್ಯಂತ ಅನಾ ರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಅವರ ಅಣ್ಣ ಹರಿಪದ ದತ್ತರಿಂದ ಕಿರಣಚಂದ್ರರ ಈ ವಿಷಯವನ್ನು ಕೇಳಿ ತಿಳಿದ ಕೃಷ್ಣ ಲಾಲ್ ಮಹಾರಾಜ್ ಯಾರಿಗೂ ಏನನ್ನೂ ಹೇಳದೆ ಹೊರಟು ಹೋದರು. ಮರುದಿನ ಬೆಳಿಗ್ಗೆ ಅವರು ಮತ್ತೆ ಬಂದು, ಕಿರಣ ಚಂದ್ರರಿಗೆ ಈ ಮರ್ಮಘಾತುಕವಾದ ದುಃಖವಾರ್ತೆಯನ್ನು ತಿಳಿಸಿದರು. ಅದರೊಂದಿಗೆ ದತ್ತಕುಟುಂಬದಲ್ಲಿ ದುಃಖದ ದಟ್ಟ ವಾದ ಕರಿನೆರಳು ಕವಿಯಿತು, ಶ್ರೀಮಾತೆಯವರ ಅಂತ್ಯಕ್ರಿಯೆಗೆ ಬೇಕಾದ ಶ್ರೀಗಂಧದ ಕಟ್ಟಿಗೆ ಹಾಗೂ ತುಪ್ಪವನ್ನು ಖರೀದಿಸಲು ಬೇಕಾದ ಹಣವನ್ನು ಕಿರಣಚಂದ್ರರು ಕೃಷ್ಣಲಾಲ್ ಮಹಾರಾಜ ರಿಗೆ ಕೊಟ್ಟರು. ಕೃಷ್ಣಲಾಲ್ ಮಹಾರಾಜ್ ಹೊರಟುಹೋದರು.

ಕಿರಣಚಂದ್ರರು ತಮ್ಮ ಅಣ್ಣನಿಗೆ ಹೇಳಿದರು: ''ಮನೆಯವ ರೆಲ್ಲರೂ ಹೋಗಿ ಶ್ರೀಮಾತೆಯವರಿಗೆ ಅಂತಿಮ ಪ್ರಣಾಮ ಸಲ್ಲಿಸಿ ಬರಲಿ. ಮನೆಯಲ್ಲಿ ಎಲ್ಲರೂ ಮೂರು ದಿನ ಸೂತಕವನ್ನು ಆಚರಿಸಲಿ.'' ಅವರ ನಿರ್ದೇಶನದಂತೆ ದತ್ತರ ಮನೆಯ ಬಾಲ ಕರು, ವೃದ್ಧರು, ಸ್ತ್ರೀಯರು ಸೇರಿದಂತೆ ಎಲ್ಲರೂ ಶ್ರೀಮಾತೆ ಯವರಿಗೆ ಅಂತಿಮ ಪ್ರಣಾಮ ಮಾಡಲು ಹೋದರು. ಆಗ ನನ್ನ ವಯಸ್ಸು ಸುಮಾರು ಹತ್ತು. ಮನೆಯವರೊಂದಿಗೆ ನಾನೂ

ಶ್ರೀಮಾತೆಯವರಿಗೆ ಕೊನೆಯ ಪ್ರಣಾಮ ಸಲ್ಲಿಸಲು ಹೋಗಿದ್ದೆ. 'ಶ್ರೀಮಾತೆಯವರ ಮನೆ'ಗೆ ಹೋಗಿ ನೋಡಿದೆ, ದೇವರ ಕೋಣೆಯ (ಅದು ಶ್ರೀಮಾತೆಯವರ ಮಲಗುವ ಕೋಣೆಯೂ ಆಗಿತ್ತು) ಮಧ್ಯಭಾಗದಲ್ಲಿ ಶ್ರೀಮಾತೆಯವರ ಭಗವತೀ ತನುವನ್ನು ಮಲಗಿಸಲಾಗಿತ್ತು. ತಲೆಯನ್ನು ಪೂರ್ವಭಾಗದ ಸಿಂಹಾಸನದ ಕಡೆಗೆ ಮಾಡಲಾಗಿತ್ತು. ಕೆಲವು ದಿನಗಳ ಮೊದಲು ಅನಾರೋಗ್ಯದಿಂದಿದ್ದ ಶ್ರೀಮಾತೆಯವರನ್ನು ನೆಲದಲ್ಲೇ ಮಲಗಿಸಿದ್ದರು. ಆಗ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಸಿಂಹಾಸನದ ಸಮೇತವಾಗಿ ಮೂರನೇ ಅಂತಸ್ತಿಗೆ ಸ್ಥಳಾಂತರ ಮಾಡಲಾಗಿತ್ತು. ಶ್ರೀಮಾತೆಯವರ ಮಂಚದ ಮುಂಭಾಗದಲ್ಲಿ ದಾಸವಾಳದ ಹೂವಿನ ಬುಟ್ಟಿಯನ್ನು ಹಿಡಿದು ಕೃಷ್ಣಲಾಲ್ ಮಹಾರಾಜ್ ನಿಂತಿದ್ದರು. ಅವರು ಒಬ್ಬೊಬ್ಬರಿಗೂ ಒಂದೊಂದು ದಾಸವಾಳದ ಹೂವನ್ನು ಕೊಡುತ್ತಿದ್ದರು; ಎಲ್ಲರೂ ಸಾಲಾಗಿ ಬಂದು ಹೂವನ್ನು ಶ್ರೀಮಾತೆಯವರ ಪಾದಗಳಿಗೆ ಅರ್ಪಿಸಿ, ಪ್ರಣಾಮ ಮಾಡಿ ಹೊರಟುಹೋಗುತ್ತಿದ್ದರು. ನಾವೆಲ್ಲರೂ ಹಾಗೆಯೇ ಮಾಡಿದೆವು.

ತಂದೆಯವರ ನಿರ್ದೇಶನದಂತೆ ನಮ್ಮ ಮನೆಯವರೆಲ್ಲರೂ ಮೂರುದಿನ ಸೂತಕವನ್ನು ಆಚರಿಸಿದೆವು. ಮರುದಿನ ಎಂದಿನಂತೆ ಬರಿಗಾಲಿನಲ್ಲಿ ಶಾಲೆಗೆ ಹೋಗಿದ್ದೆ. ಎಣ್ಣೆ ಹಚ್ಚದೆ ಒಣಗಿದ್ದ ತಲೆಗೂದಲು. ಅಧ್ಯಾಪಕರು ಕೇಳಿದಾಗ ಹೇಳಿದೆ, ''ಶ್ರೀಮಾತೆಯವರು ದೇಹತ್ಯಾಗ ಮಾಡಿದ್ದಾರೆ. ಹಾಗಾಗಿ ನಮಗೆ ಸೂತಕ.'' ಅಧ್ಯಾಪಕರ ಮನೆಯಲ್ಲಿ ನಡೆದ ಮಾತುಕತೆ ಕಿವಿಗೆ ಬಿತ್ತು: ''ಕೇಳಿದಿರಾ ಮಹಾಶಯರೆ, ಶ್ರೀರಾಮಕೃಷ್ಣರ ಪತ್ನಿ ತೀರಿಕೊಂಡರಂತೆ – ದತ್ತರ ಮನೆಯಲ್ಲಿ ಸೂತಕ!'' ಅವರ ಈ ವಿಕೃತ ರೂಪದ ಚರ್ಚೆ ನನಗೆ ತುಂಬ ಸಂಕಟವನ್ನುಂಟುಮಾಡಿತ್ತು. *

# ೨. ಶ್ರೀಮಾತೆಯವರ ನೆನಪುಗಳು

ಮೂಲ ಬಂಗಾಳಿ : **ಸ್ವರ್ಣಕುಮಾರಿ ದೇವಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ನನ್ನ ಪತಿಯ ಹೆಸರು ಉಪೇಂದ್ರಚಂದ್ರ ರಾಯ್. ನಮ್ಮ ಮೂಲ ಸ್ಥಾನವಿದ್ದುದು ಪೂರ್ವಬಂಗಾಳದಲ್ಲಿ ೧ (ಈಗಿನ ಬಾಂಗ್ಲಾದೇಶದಲ್ಲಿ). ಆಗ ನಾವು ರಾಂಚಿಯಲ್ಲಿ ವಾಸ ಮಾಡುತ್ತಿದ್ದೆವು. ಅಲ್ಲಿ ಬೇಲೂರು ಮಠದ ಭಕ್ತರಾಗಿದ್ದ ಅನೇಕ ಮಂದಿ ಬಂಗಾಳಿಗಳ (ಬಾಂಗ್ಲಾದೇಶದ) ಪರಿಚಯ ನಮಗಿತ್ತು. ನಾನು ಅವರಿಂದ ಶ್ರೀಮಾತೆಯವರ ಬಗ್ಗೆ ಕೇಳಿ ತಿಳಿಯುತ್ತಿದ್ದೆ. ಈ ಸಂಬಂಧದಲ್ಲೇ ನಾನು ಹಾಗೂ ನನ್ನ ಪತಿ ಇಬ್ಬರೂ ಬಾಗ್ ಬಜಾರಿನಲ್ಲಿರುವ 'ಶ್ರೀಮಾತೆಯವರ ಮನೆ'ಗೆ ('ಉದ್ಬೋಧನ') ಹೋಗಿ, ಶ್ರೀಮಾತೆಯವರ ದರ್ಶನ ಪಡೆದು, ಮಂತ್ರದೀಕ್ಷೆಗಾಗಿ ಪ್ರಾರ್ಥಿಸಿಕೊಂಡೆವು. ಶ್ರೀಮಾತೆಯವರು ಕೃಪೆದೋರಿ ನಮ್ಮ ಪ್ರಾರ್ಥನೆಗೆ ಅನುಮೋದನೆ ನೀಡಿದರು. ಬಾಗ್‌ಬಜಾರಿನ 'ಶ್ರೀಮಾತೆಯವರ ಮನೆ' ಯಲ್ಲೇ ನಮ್ಮ ಮಂತ್ರದೀಕ್ಷೆ ನಡೆಯಿತು. ದೀಕ್ಷೆ ಪಡೆದ ದಿನಾಂಕ, ವರ್ಷ ಸರಿಯಾಗಿ ನೆನಪಿಲ್ಲ. ಬಹುಶಃ ೧೯೧೮ರಲ್ಲಿ ನಮ್ಮ ದೀಕ್ಷೆ ನಡೆದಿರಬೇಕು.

ಶ್ರೀಮಾತೆಯವರೊಂದಿಗೆ ವಿಶೇಷ ಮಾತುಕತೆ ನಡೆಸುವ ಸುಯೋಗ ನನಗೆ ಲಭಿಸಲಿಲ್ಲ; ದೀಕ್ಷೆಯ ಸಮಯದಲ್ಲಿ ಮಾತ್ರ ಒಂದಿಷ್ಟು ಮಾತುಕತೆ ನಡೆಯಿತು. ಆದರೂ ಒಂದು ದಿನದ ಮಾತುಕತೆ ನೆನಪಿನಲ್ಲಿದೆ. ಅಂದು ಶ್ರೀಮಾತೆಯವರ ದರ್ಶನ ಪಡೆಯಲು 'ಉದ್ಬೋಧನ'ಕ್ಕೆ ಹೋಗಿದ್ದೆ. ಶ್ರೀಮಾತೆಯವರ ಕೋಣೆಯಲ್ಲಿ ಹಲವು ಮಂದಿ ಹುಡುಗಿಯರು ಕುಳಿತಿದ್ದರು. ನಾನು ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, ಒಂದು ಬದಿಯಲ್ಲಿ ಕುಳಿತೆ. ಆಗ ನನ್ನದು ಸಣ್ಣ ವಯಸ್ಸು, ಅಂದಿನ ಕಾಲದ ಮುತ್ತೈದೆ. ಸಾಮಾನ್ಯವಾಗಿ ನಾನು ಅಲ್ಲಿ ಏನೂ ಮಾತನಾಡುತ್ತಿರಲಿಲ್ಲ ; ಸುಮ್ಮನೆ ಶ್ರೀಮಾತೆಯವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ಶ್ರೀಮಾತೆಯವರು ಏನು ಹೇಳುತ್ತಿದ್ದರು ಎಂಬುದು ನೆನಪಿಲ್ಲ. ಆದರೆ ಅವರ ಕಂಠ ಅತ್ಯಂತ ಮಧುರವಾಗಿತ್ತು ಎಂಬುದು ಮಾತ್ರ ನನಗೆ ನೆನಪಿದೆ. ಮೃದುವಾದ ಧ್ವನಿಯಿಂದ ಅವರು ನಿಧಾನವಾಗಿ ಮಾತನಾಡುತ್ತಿದ್ದರು. ಶ್ರೀಮಾತೆಯವರ ತಲೆಗೂದಲು ತುಂಬ ಸುಂದರವಾಗಿ, ದಟ್ಟವಾದ ರೇಷ್ಮೆಯಂತೆ ಕಪ್ಪು ಬಣ್ಣದ್ದಾಗಿತ್ತು. ನಾನು ಪದೇ ಪದೇ ಅವರ ಆ ಸುಂದರ ಕೂದಲನ್ನೇ ನೋಡುತ್ತಿದ್ದೆ. ನನಗೆ ತುಂಬ ಆಸೆಯಾಯಿತು– ಶ್ರೀಮಾತೆಯವರ ಕೂದಲಲ್ಲಿ ಒಂದಿಷ್ಟು ಕೈಯಾಡಿಸಿಬಿಟ್ಟಿದ್ದರೆ– ಅಂತ. ಆದರೆ ಅದು ಅಸಾಧ್ಯವೆಂದು ಗೊತ್ತಿತ್ತು. ನನ್ನ ಮನದಾಸೆಯನ್ನು ಶ್ರೀಮಾತೆಯವರ ಮುಂದೆ ಹೇಳಿಬಿಡುವಷ್ಟು ಧೈರ್ಯ ನನಗಿರಲಿಲ್ಲ. ಆದರೆ ಎಂಥ ಆಶ್ಚರ್ಯ! ನನ್ನ ಮನಸ್ಸಿನಲ್ಲಿ ಯಾವಾಗ ಈ ಆಲೋಚನೆಯೆದ್ದಿತೋ, ಆಗ ಹಠಾತ್ತನೆ ಶ್ರೀಮಾತೆಯವರು ನನ್ನತ್ತ ನೋಡಿ, ನನ್ನನ್ನು ತಮ್ಮ ಬಳಿಗೆ ಕರೆದರು. ನನಗೆ ಭಯವುಂಟಾಯಿತು. ಆದರೂ ಅವರ ಬಳಿಗೆ ಹೋದೆ. ಶ್ರೀಮಾತೆ ಅತ್ಯಂತ ಸ್ನೇಹದಿಂದ ಹೇಳಿದರು, ''ತಲೆಯೆಲ್ಲ ತುರಿಸುತ್ತಿದೆ, ನನ್ನ ತಲೆಯಲ್ಲಿ ತುಸು ಕೈಯಾಡಿಸು ತಾಯಿ.'' ನಾನು ಸ್ತಂಭೀಭೂತಳಾದೆ. ನಾನು ಅವರ ಕೂದಲಲ್ಲಿ

---

೧ ಸ್ವರ್ಣಕುಮಾರಿ ದೇವಿಯವರ ಪುತ್ರ ಶಾರದಾರಂಜನ್ ರಾಯ್ ನಮಗೆ ತಿಳಿಸಿದ್ದಾರೆ, ಅವರ ಮೂಲಸ್ಥಾನವಿದ್ದುದು ಈಗಿನ ಬಾಂಗ್ಲಾದೇಶದ ಕೊಮಿಲ್ಲಾ ಜಿಲ್ಲೆಯಲ್ಲಿತ್ತು ಎಂದು. ಆಗ ಶ್ಯಾಮ ಗ್ರಾಮವು ತ್ರಿಪುರಾ ಜಿಲ್ಲೆಗೆ ಅಧೀನವಾಗಿತ್ತು. *(–ಸಂ)*

ಕೈಯಾಡಿಸಿದೆ. ಅರಿತೆ – ತಾಯಿ ಜಗಜ್ಜನನಿ, ಅಂತರ್ಯಾಮಿನಿ ಎಂದು. ಎಲ್ಲರ ಮನಸ್ಸಿನಲ್ಲಿ ಏನೇನು ಮಾತುಗಳು ನಡೆಯುತ್ತಿವೆ ಎಲ್ಲವನ್ನೂ ಅವರು ಅರಿತುಕೊಳ್ಳಬಲ್ಲರು – ಎಂದು.

ಇನ್ನೊಂದು ವಿಷಯ ಹೇಳುತ್ತೇನೆ. ಆಗ ನನ್ನ ಪತಿ ಮರಣ ಶಯ್ಯೆಯಲ್ಲಿದ್ದರು. ಹಠಾತ್ತನೆ ಅವರೆಂದರು: ''ಠಾಕೂರ್ ನನ್ನನ್ನು ಕರೆದುಕೊಂಡು ಹೋಗಲು ಬಂದಿದ್ದಾರೆ. ನೀವೆಲ್ಲ ಅಳಬಾರದು. ನಾನು ಹೋಗುತ್ತೇನೆ.'' ಹೀಗೆ ಹೇಳುತ್ತಲೇ ಅವರು ಕಣ್ಣುಮುಚ್ಚಿದರು. ಅದು ೧೯೩೭ರ ಜುಲೈ ೧ನೇ ತಾರೀಕು. ಮುಂದೆ ನಾನು ಕೇಳಿದೆ, ಠಾಕೂರ್ ಶ್ರೀಮಾತೆಯವರಿಗೆ ಹೇಳಿದ್ದರಂತೆ – ನೀನು ಯಾರಿಗೆಲ್ಲ ಆಶ್ರಯ ನೀಡುವೆಯೋ, ಅವರ ಅಂತ್ಯಕಾಲದಲ್ಲಿ ನಾನೇ ಬಂದು ಕರೆದುಕೊಂಡು ಹೋಗುತ್ತೇನೆ ಎಂಬುದಾಗಿ. ನನ್ನ ಪತಿಯವರ ವಿಷಯದಲ್ಲಿ ನಾನು ನೋಡಿದೆ – ಠಾಕೂರರು ತಮ್ಮ ಮಾತನ್ನು ಉಳಿಸಿಕೊಂಡರು.

ದೀಕ್ಷೆಯಾದ ಕೆಲವು ವರ್ಷಗಳ ನಂತರ ನನ್ನ ಮಗನ ಜನನವಾಯಿತು. ನಾವು ಅವನಿಗೆ 'ಶಾರದಾ' ಎಂದು ಹೆಸರಿಟ್ಟೆವು.[೨] ❋

---

೨ ಈ ಲೇಖನವನ್ನು ನಾವು ಲೇಖಕಿಯ ಪುತ್ರ ಶಾರದಾರಂಜನ್ ರಾಯ್ ಅವರಿಂದ ಪಡೆದೆವು. ಅವರು ಶ್ರೀಮಾತೆಯವರು ಅವರ ತಂದೆ ಉಪೇಂದ್ರ ಚಂದ್ರ ರಾಯ್ ಅವರಿಗೆ ಬರೆದ ೭ ಪತ್ರಗಳನ್ನು ನಮಗೆ ನೀಡಿದರು. ಇವೆಲ್ಲ ಪ್ರಕಟವಾಗಿವೆ. *(–ಸಂ)*

# ೩. ಶ್ರೀಮಾತೆಯವರ ನೆನಪಿನ ತುಣುಕು

ಮೂಲ ಬಂಗಾಳಿ : **ಮಂಜುಲಾಲೀ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಮಂಜುಲಾಲೀ ಮಿತ್ರ ಅವರು ಬಲರಾಮ ಬಸು ಅವರ ಮೊಮ್ಮಗಳು; ರಾಮಕೃಷ್ಣ ಬಸುವಿನ ಹಿರಿಯ ಮಗಳು. ಆಕೆಯ ಪತಿ ರವೀಂದ್ರಕೃಷ್ಣ ಮಿತ್ರ. ಆಕೆ ಹಾಗೂ ಅವಳ ಪತಿ ಇಬ್ಬರೂ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದ ಶಿಷ್ಯಂದಿರು. ಈ ನೆನಪಿನ ತುಣುಕು ನಮಗೆ ಲಭಿಸಿರುವುದು ಲೇಖಕಿಯ ಕಿರಿಯ ಮಗಳು ತಪಜಾ ಹಾಲದಾರ್ ಅವರ ಕೃಪೆಯಿಂದ. *(–ಸಂ)*

**ನ**ನಗೆ ಬುದ್ಧಿ ಬಂದಾಗಿನಿಂದ ನಾನು ಶ್ರೀಮಾತೆಯವರನ್ನು ನೋಡಿದ್ದೇನೆ. ಶ್ರೀಮಾತೆಯವರು ನಮ್ಮ ಕುಟುಂಬದ ನಡುವೆ ರತ್ನದಂತಿದ್ದರು. ಎಷ್ಟೊಂದು ಬಾರಿ ನಾನು ಶ್ರೀಮಾತೆಯವರ ಮಡಿಲ ಮೇಲೆ, ಬೆನ್ನ ಮೇಲೆ ಹತ್ತಿ ಇಳಿದಿದ್ದೇನೆ, ಅವರಿಂದ ಎಷ್ಟೊಂದು ಸ್ನೇಹ-ಪ್ರೀತಿ ಪಡೆದಿದ್ದೇನೆ! ಅದನ್ನೆಲ್ಲಾ ನೆನೆದರೆ ಕಣ್ಣುಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ಆಗ ಶ್ರೀಮಾತೆಯವರ ಮಹಿಮೆಯನ್ನು ನಾನು ಯೋಚಿಸಿರಲಿಲ್ಲ – ಹಾಗೆ ಯೋಚನೆ ಮಾಡುವ ಪ್ರಸಂಗವೇ ಬಂದಿರಲಿಲ್ಲ. ಏನೊಂದೂ ಅರ್ಥವಾಗಿರಲಿಲ್ಲ. ಈಗಲಾದರೂ ಏನು ಅರ್ಥವಾಗುವುದು ನನಗೆ! ಅವರು ನನ್ನ ತಾಯಿಗೆ ಹೋಲಿಸಿದರೆ, ಇನ್ನಷ್ಟು ಆತ್ಮೀಯರಾಗಿದ್ದರು. ಎಷ್ಟೊಂದು ಜನ್ಮಗಳ ಸುಕೃತದಿಂದ ಅವರ ಚರಣಗಳಲ್ಲಿ ಆಶ್ರಯ ಪಡೆದೆ – ಎಂದು ಈಗ ಭಾವಿಸುತ್ತೇನೆ! ಅವರ ಒಡನಾಟವನ್ನು ಇನ್ನೂ ಹೆಚ್ಚು ಯಾಕೆ ಹೊಂದಲಾಗಿಲ್ಲ ಅಂತ ಈಗ ಪಶ್ಚಾತ್ತಾಪವಾಗುತ್ತಿದೆ!

ನನ್ನ ತಾಯಿ (ಸುಶೀಲಾಬಾಲಾ ಬಸು) ಹೇಳುತ್ತಿದ್ದರು: ''ಶ್ರೀಮಾತೆಯವರ ಕೂದಲನ್ನು ಎತ್ತಿಕೊಡು. ಜಾಗ್ರತೆ, ಒಂದು ಕೂದಲನ್ನೂ ಬೀಳಿಸಬೇಡ! ಜಾಗ್ರತೆಯಾಗಿ ಎತ್ತಿಡು!'' ನನ್ನ ತಾಯಿ ಶ್ರೀಮಾತೆಯವರ ಕೂದಲನ್ನು ಕುಂಕುಮದ ನಡುವೆ ಜಾಗ್ರತೆಯಾಗಿ ಇಟ್ಟಿರುತ್ತಿದ್ದರು. ಶ್ರೀಮಾತೆ ಊಟ ಮಾಡಿದ ಎಲೆಯಲ್ಲಿ ಏನೇನು ಉಳಿದಿರುತ್ತಿತ್ತೋ ಅವನ್ನು ನನ್ನ ತಾಯಿ ಮಹಾಪ್ರಸಾದವೆಂದೇ ಭಾವಿಸಿ, ಅತ್ಯಂತ ಆನಂದದಿಂದ ತಿನ್ನುತ್ತಿದ್ದರು; ನಮಗೆಲ್ಲರಿಗೂ ಕೊಡುತ್ತಿದ್ದರು. ತಟ್ಟೆಯ ಕೆಳಗೆ ನೆಲದಲ್ಲಿ, ಅಥವಾ ತಟ್ಟೆಯ ಪಕ್ಕದಲ್ಲಿ ಏನಾದರೂ ಆಹಾರ ಬಿದ್ದಿದ್ದರೆ, ಅದನ್ನು ಬಹಳ ಜಾಗ್ರತೆಯಾಗಿ ತೆಗೆದುಕೊಂಡು ತಮ್ಮ ಬಾಯಿಗೆ ಹಾಕಿಕೊಳ್ಳುತ್ತಿದ್ದರು. ''ಬೆರಳಲ್ಲಿ ಹೆಕ್ಕಿ ಎತ್ತಿಡು! ಇದು ಮಹಾಪ್ರಸಾದ!'' ಎಂದು ನಮಗೆ ಕಲಿಸುತ್ತಿದ್ದರು. ❋

ಒಮ್ಮೆ ಉಪಮನ್ಯುವಿಗೆ ಹಾಲು ಕುಡಿಯಲು ಅಪೇಕ್ಷೆಯಾಯಿತು. ಅವನು ಆಗತಾನೇ ತನ್ನ ಚಿಕ್ಕಮ್ಮನ ಮನೆಯಿಂದ ಹಿಂದಿರುಗಿದ್ದ. ಅಲ್ಲಿ ಅವನು ಹಾಲಿನ ರುಚಿ ಕಂಡಿದ್ದ. ಇಲ್ಲಿಗೆ ಬಂದಾಗ ತಾಯಿಯನ್ನು ತನಗೆ ಹಾಲು ಕೊಡೆಂದು ಪೀಡಿಸಿದ. ಅವಳೊಬ್ಬ ಬಡ ವಿಧವೆ. ಮಗನಿಗೆ ಹಾಲಿಗಾಗಿ ದುಡ್ಡು ಖರ್ಚು ಮಾಡುವಷ್ಟು ಶಕ್ಯಳಾಗಿರಲಿಲ್ಲ. ಆದರೆ ಅವನು ಬೇಕೇಬೇಕೆಂದು ಹಠ ಮಾಡಿದಾಗ, ಅಕ್ಕಿ ಹಿಟ್ಟನ್ನು ನೀರಿನಲ್ಲಿ ಕದಡಿ ಅದನ್ನು ಹಾಲೆಂದು ಮಗನಿಗೆ ಕುಡಿಯಲು ಕೊಟ್ಟಳು. ಉಪಮನ್ಯುವಿಗೆ ಈ ಹಾಲು ಚಿಕ್ಕಮ್ಮನ ಮನೆಯಲ್ಲಿ ತಾನು ಕುಡಿಯುತ್ತಿದ್ದ ಹಾಲಿನಂತಿರಲಿಲ್ಲ. ತಾಯಿ 'ಇದು ಹಾಲು' ಎಂದಾಗ ಅವನು ನಂಬಲೇ ಇಲ್ಲ. ತಾಯಿ ಅಳತೊಡಗಿದಳು. 'ನಾನೊಬ್ಬ ಬಡ ಹೆಂಗಸು. ಹಾಲನ್ನು ನಾನೆಲ್ಲಿಂದ ತರಲಿ, ಮಗು? ಐಶ್ವರ ಕೊಡತಕ್ಕವನು ಈಶ್ವರ. ನೀನು ನಿನ್ನ ಪ್ರಾರ್ಥನೆ ಸಾಧನೆಯಿಂದ ಅವನನ್ನು ಮೆಚ್ಚಿಸಿದರೆ, ಅವನು ನಿನಗೆ ಹೇರಳವಾದ ಹಾಲನ್ನು ಹೊಂದುವ ವರ ಕೊಡುವನು' ಎಂದಳು. ಉಪಮನ್ಯು ಬಹಳ ಕಠಿಣ ತಪಸ್ಸಿನಲ್ಲಿ ನಿರತನಾದನು. ಕೊನೆಗೆ ಮಹಾದೇವನು ಪ್ರತ್ಯಕ್ಷವಾಗಿ ಅವನಿಚ್ಛೆಪಟ್ಟ ವರವನ್ನು ದಯಪಾಲಿಸಿದನು. *('ಸಾಧಕನ ಕೈದೀವಿಗೆ', ಪು. ೫೦)*

# ಸೋದರಿ ಕಲ್ಯಾಣಿ: ಮೃದು ಹೃದಯದ ಸಾಹಸಿ, ದಿವ್ಯ ಮಹಿಳೆ

**ಸ್ವಾಮಿ ಸತ್ಯೇಶಾನಂದ**

ಅವಿರತ ಸೇವೆಯ ಮೂಲಕ ಆಧ್ಯಾತ್ಮಿಕ ಜೀವನವನ್ನು ಉನ್ನತ ಹಂತಕ್ಕೆ ಏರಿಸಬಹುದು, ಅದರೊಂದಿಗೆ ಅನೇಕ ಮಂದಿ ದೀನದಲಿತರ ಬದುಕಿನಲ್ಲಿ ನಲಿವನ್ನೂ ಮೂಡಿಸಬಹುದು ಎಂಬುದಕ್ಕೆ ಯೋಗ್ಯ ಉದಾಹರಣೆ ಸೋದರಿ ಕಲ್ಯಾಣಿಯದು. ಅವಳ ಅಪೂರ್ವ ಜೀವನಕಥೆ ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಮಾಸಪತ್ರಿಕೆ 'Prabuddha Bharata'ದ ಅಕ್ಟೋಬರ್ ೨೦೨೩ರ ಸಂಚಿಕೆಯಲ್ಲಿ ಪ್ರಕಟವಾಗಿದ್ದು, ಅದರ ಕನ್ನಡಾನುವಾದ ಇಲ್ಲಿದೆ. ಲೇಖಕರು ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ನಿನ ಸಹಾಯಕ ಕಾರ್ಯದರ್ಶಿಗಳಾಗಿದ್ದು, ಬೇಲೂರು ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ರಾಮಕೃಷ್ಣ ವಿದ್ಯಾಶಾಲೆಯ ಸಂಚಾಲಕರಾಗಿದ್ದ ಅವರು ಉತ್ತಮ ವಾಗ್ಮಿ ಕೂಡ ಹೌದು.

ಮಹಾಪುರುಷ ಮಹಾರಾಜರ (ಸ್ವಾಮಿ ಶಿವಾನಂದರು) ಇಬ್ಬರು ದೀಕ್ಷಾ ಶಿಷ್ಯಂದಿರ ನಡುವೆ ಒಂದು ಬಾರಿ ಭಾವಪೂರ್ಣವಾದ ಸಂಭಾಷಣೆ ನಡೆಯಿತು. ಅವರಲ್ಲೊಬ್ಬರು ರಾಮಕೃಷ್ಣ ಮಹಾಸಂಘದ ಧೀಮಂತ ಸಂನ್ಯಾಸಿ; ತಿರುವನಂತಪುರ ಕೇಂದ್ರದ ಅಧ್ಯಕ್ಷರು. ಅವರು ತಮ್ಮ ವಿದ್ವತ್ತಿಗೆ, ತಪೋಮಯ ಜೀವನಕ್ಕೆ, ಪರಿಶುದ್ಧ ವ್ಯಕ್ತಿತ್ವಕ್ಕೆ, ತ್ಯಾಗ ಹಾಗೂ ಶಿಸ್ತುಬದ್ಧ ಜೀವನಕ್ಕೆ ಹೆಸರುವಾಸಿಯಾದವರು. ಇದರೊಂದಿಗೆ ಆಡಳಿತ ಸಾಮರ್ಥ್ಯಕ್ಕೆ ಹಾಗೂ ಶ್ರೀರಾಮಕೃಷ್ಣ-ಶ್ರೀಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಆದರ್ಶಗಳ ಮೇಲೆ ಇದ್ದ ಬದ್ಧತೆಗೆ ಅವರು ಪ್ರಸಿದ್ಧರಾಗಿದ್ದರು; ದೀನದಲಿತರ ಸೇವೆಗೆ ಕೂಡ ಖ್ಯಾತರಾಗಿದ್ದರು. ಮುಂದೆ ಅವರು ರಾಮಕೃಷ್ಣ ಮಹಾಸಂಘದ ಒಬ್ಬ ಗೌರವಾನ್ವಿತ ಉಪಾಧ್ಯಕ್ಷರಾದರು; ಪ್ರೀತಿ ದಯೆಗಳಿಂದ ಕೂಡಿದ ಆಧ್ಯಾತ್ಮಿಕ ಗುರುವಾಗಿ ಅವರು ಅನೇಕ ಮಂದಿ ಆಧ್ಯಾತ್ಮಿಕ ಸಾಧಕರ ಹೃದಯವನ್ನು ಬೆಳಗಿದರು. ಅವರೇ ಅಚ್ಚಳಿಯದ ಸ್ಮರಣ ಶಕ್ತಿಯ ಪ್ರಸಿದ್ಧ ಸ್ವಾಮಿ ತಪಸ್ಯಾನಂದರು.




ಶ್ರೀಮತಿ ಪಾರುಕುಟ್ಟಿ ಅಮ್ಮ (ಎಡಗಡೆ), ಸ್ವಾಮಿ ಶಿವಾನಂದರ ಶಿಷ್ಯೆ ; ಅವರ ತಂದೆ ಶ್ರೀ ಪದ್ಮನಾಭ ತಂಬಿ (ಮೇಲ್ಭಾಗದಲ್ಲಿ), ಸ್ವಾಮಿ ಬ್ರಹ್ಮಾನಂದರ ಶಿಷ್ಯರು

ಇನ್ನೊಬ್ಬರು ಬಹಳ ಗೌರವಾನ್ವಿತ ಮಹಿಳೆ; ಮಹಾಪುರುಷ ಮಹಾರಾಜರಿಂದ (ಸ್ವಾಮಿ ಶಿವಾನಂದರು) ಮಂತ್ರದೀಕ್ಷೆ ಪಡೆದಿದ್ದವರು – ಶ್ರೀಮತಿ ಪಾರುಕುಟ್ಟಿ ಅಮ್ಮ. ಶ್ರೀರಾಮಕೃಷ್ಣರ ಮಾನಸ ಪುತ್ರ ಹಾಗೂ 'ಆಧ್ಯಾತ್ಮಿಕ ಶಿಶು' ಎನಿಸಿಕೊಂಡಿದ್ದ ಸ್ವಾಮಿ ಬ್ರಹ್ಮಾನಂದರ ಕೃಪೆಗೆ ಪಾತ್ರರೂ ಅವರಿಂದ ಮಂತ್ರದೀಕ್ಷೆ ಪಡೆದವರೂ ಆದ ಶ್ರೀ ಪದ್ಮನಾಭ ತಂಬಿಯವರ ಮಗಳೇ ಆಕೆ. ತಿರುವಾಂಕೂರು ರಾಜ್ಯದ ಪೋಲಿಸ್ ಕಮಿಷನರ್ ಕೂಡ ಆಗಿದ್ದರು ಶ್ರೀ ಪದ್ಮನಾಭ ತಂಬಿ. ಅವರು ತಮ್ಮ ಪ್ರಸಿದ್ಧ ಸಹೋದರ ಡಾ. ರಾಮನ್ ತಂಬಿಯವರೊಂದಿಗೆ ತಿರುವನಂತಪುರದ ಶ್ರೀರಾಮಕೃಷ್ಣ ಆಶ್ರಮವನ್ನು ಆರಂಭಿಸಲು ಅಪಾರ ಶ್ರಮವಹಿಸಿ ದುಡಿದಿದ್ದರು.

ಅದು ೧೯೬೨ರ ಸಮಯ. ಸ್ಥಳ : ತಿರುವನಂತಪುರದ ಶಾಸ್ತಾಮಂಗಲಂ, ಶ್ರೀರಾಮಕೃಷ್ಣ ಆಶ್ರಮ ಚಾರಿಟೆಬಲ್ ಹಾಸ್ಪಿಟಲ್.

ಪ್ರಸ್ತುತ ಕಥೆಯ ನಾಯಕಿ, ಸೋದರಿ ಕಲ್ಯಾಣಿ – ಶ್ರೀಮತಿ ಪಾರುಕುಟ್ಟಿ ಅಮ್ಮ ಹಾಗೂ ಪ್ರೊಫೆಸರ್ ಕೆ.ವಿ. ಗೋವಿಂದ ಪಿಳ್ಳೈ ಅವರ ಮಗಳು. ಗೋವಿಂದ ಪಿಳ್ಳೈ ಬೆಂಗಳೂರಿನ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದರು.

ಪಾರುಕುಟ್ಟಿ ಅಮ್ಮ ಸ್ವಾಮಿ ತಪಸ್ಯಾನಂದಜಿಯವರಿಗೆ ಹೇಳಿದರು: ''ಮಹಾರಾಜ್, ಅಬು (ಕಲ್ಯಾಣಿ) ತ್ಯಾಗ, ವೈರಾಗ್ಯಗಳಿಂದ ತುಂಬಿ ತುಳುಕಾಡುತ್ತಿದ್ದಾಳೆ. ಅವಳು ಎಲ್ಲವನ್ನೂ ತ್ಯಾಗ ಮಾಡಿ ಶ್ರೀಶಾರದಾ ಮಠಕ್ಕೆ ಸೇರಬೇಕೆಂದಿದ್ದಾಳೆ.''

ಸ್ವಾಮಿ ತಪಸ್ಯಾನಂದರು ಮಿತಭಾಷಿ; ತಮ್ಮ ಭಾವನೆಗಳನ್ನು ಸಾಧಾರಣವಾಗಿ ವ್ಯಕ್ತಪಡಿಸುತ್ತಿರಲಿಲ್ಲ. ಅವರು ನಿರ್ಭಾವುಕ ಸಂನ್ಯಾಸಿಯಾಗಿದ್ದರೂ, ಈಗ ಅವರಿಗೆ ತಮ್ಮ ಭಾವನೆಗಳನ್ನು ತಡೆಹಿಡಿಯಲಾಗಲಿಲ್ಲ. ಅವರು ಮೃದುವಾಗಿ ಹೇಳಿದರು:

''ಕಲ್ಯಾಣಿ ನನ್ನ ಮಗಳಂತೆಯೇ ಇದ್ದಾಳೆ; ನನ್ನ ಪುಟ್ಟ ಮಗಳು ಆಕೆ. ಅವಳು ನಮ್ಮ ಈ ಆಸ್ಪತ್ರೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾಳೆ. ಅವಳು ಮಾಡುತ್ತಿರುವ ದಾದಿಯ ಕೆಲಸವನ್ನು ನಮ್ಮ ವೈದ್ಯರು, ಸಾಧುಗಳು, ಸಿಬ್ಬಂದಿಗಳು ಹಾಗೂ ರೋಗಿಗಳು ತುಂಬಾ ಮೆಚ್ಚಿಕೊಂಡಿದ್ದಾರೆ. ಪ್ರತಿದಿನ ಅವಳು ಕೆಲಸ ಮುಗಿಸಿದ ನಂತರ ನನ್ನ ಆಧ್ಯಾತ್ಮಿಕ ತರಗತಿಗೆ ಹಾಜರಾಗುತ್ತಾಳೆ. ಶ್ರೀರಾಮಕೃಷ್ಣ, ಶ್ರೀ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಮೇಲೆ ಅವಳಿಗೆ ಅಪಾರ ಭಕ್ತಿ. ಅವಳು ಹೊರಟು ಹೋದರೆ ನಮ್ಮ ಆಸ್ಪತ್ರೆಗೆ ಅದು ತುಂಬಲಾರದ ನಷ್ಟವಾಗುವುದು. ಅವಳ ರಾಜೀನಾಮೆಯನ್ನು ಸ್ವೀಕರಿಸುವುದು ನನಗೆ ಅತ್ಯಂತ ಕಷ್ಟ. ಶ್ರೀರಾಮಕೃಷ್ಣರ ಇಚ್ಛೆಯಂತಾಗಲಿ.''

ತನ್ನ ಮಗಳನ್ನು ಅಗಲುವ ಪ್ರೀತಿಯ ತಂದೆಗೆ ಉಂಟಾಗುವ ನೋವಿನ ಭಾವನೆ ಅದು.



ತಾರುಣ್ಯದಲ್ಲಿ ಕಲ್ಯಾಣಿ

ಮೇಲಿನ ಸಂಭಾಷಣೆಯು ಸೋದರಿ ಕಲ್ಯಾಣಿಯನ್ನು ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನದ ಇತಿಹಾಸದಲ್ಲಿ ಒಂದು ದಂತಕತೆಯನ್ನಾಗಿಸಿತು. ಅವರು ಹೇಗೆ ಈ ಶ್ರೇಷ್ಠ ಸಂಸ್ಥೆಯಲ್ಲಿ ಮೂವತ್ತು ವರ್ಷಗಳಿಗೂ ಹೆಚ್ಚುಕಾಲ ಸೇವೆ ಸಲ್ಲಿಸಿದರು ಎಂಬುದು ಒಂದು ಕುತೂಹಲಕಾರಿಯಾದ ಕಥೆಯಾಗಿದೆ. ಕಲ್ಯಾಣಿ ಶ್ರೀ ಶಾರದಾ ಮಠದಲ್ಲಿ ಬ್ರಹ್ಮಚಾರಿಣಿಯಾಗಿ ಸೇರಿಕೊಂಡರೂ, ಅಲ್ಲಿ ಆಕೆಗೆ ಮುಂದುವರಿಯಲಾಗಲಿಲ್ಲ; ಹೀಗಾಗಿ ಆಕೆ ಸಂನ್ಯಾಸಿನಿಯಾಗಲಿಲ್ಲ. ತೀವ್ರ ಮಧುಮೇಹ ಕಾಯಿಲೆಯಿಂದ ಆಕೆ ನರಳುತ್ತಿದ್ದಳು. ಆದ್ದರಿಂದ ಶ್ರೀಶಾರದಾ ಮಠವನ್ನು ತ್ಯಜಿಸಬೇಕಾಯಿತು. ಆದರೂ, ಅವಳಿಗಾಗಿ ಶ್ರೀರಾಮಕೃಷ್ಣರು ಬೇರೆ ಮಹತ್ತರ ಯೋಜನೆಯನ್ನು ತಯಾರಿಸಿದ್ದರು.

ಸ್ವಾಮಿ ಬ್ರಹ್ಮಾನಂದರ ಪ್ರಸಿದ್ಧ ಶಿಷ್ಯರಾಗಿದ್ದ ಸ್ವಾಮಿ ಯತೀಶ್ವರಾನಂದರಿಂದ ಮಂತ್ರದೀಕ್ಷೆ ಪಡೆದಿದ್ದಳು ಕಲ್ಯಾಣಿ. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದ ಸ್ವಾಮಿ ಯತೀಶ್ವರಾನಂದರು ತಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಎಲ್ಲರ ಗೌರವ, ಪ್ರೀತಿಗಳಿಗೆ ಪಾತ್ರರಾಗಿದ್ದರು. ಪ್ರೀತಿಪಾತ್ರನಾದ ತಂದೆಯಂತೆ ಅವರು ತಮ್ಮ ಆಧ್ಯಾತ್ಮಿಕ ಪುತ್ರಿಯಾದ ಕಲ್ಯಾಣಿಯ ಮೇಲೆ ಅಪಾರ ಪ್ರೀತಿಯನ್ನು ಹರಿಸಿದ್ದರು; ಅವಳು ಶ್ರೀಶಾರದಾ ಮಠದಲ್ಲಿದ್ದಾಗ ಅವರು ಬಹುತೇಕ ಪ್ರತಿದಿನವೂ ಕರೆ ಮಾಡಿ ಅವಳ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದರು. ಅರವತ್ತು ವರ್ಷಗಳಿಗೆ ಮೊದಲು ಫೋನ್ ಕರೆ ಮಾಡುವುದು ಎಷ್ಟು ಕಷ್ಟವಾಗಿತ್ತೆಂದು ನಾವೀಗ ಊಹಿಸಬಹುದು.

ಸ್ವಾಮಿ ಯತೀಶ್ವರಾನಂದಜಿ ಕಲ್ಯಾಣಿಗೆ ಹೇಳಿದರು: ''ನೀನು ನಿನ್ನ ಆರೋಗ್ಯದ ಬಗ್ಗೆ ಗಮನ ಕೊಡಬೇಕು. ನೀನು ದಾದಿಯಾಗಿ ಚೆನ್ನಾಗಿ ನುರಿತಿರುವೆ. ಆದ್ದರಿಂದ ರಾಮಕೃಷ್ಣ ಸೇವಾಪ್ರತಿಷ್ಠಾನದಲ್ಲಿ ನಿನ್ನ ಸೇವೆ ಸಲ್ಲಿಸು. ಇಲ್ಲಿಯತನಕ ನೀನು ಬಾವಿಯೊಳಗಿನ ಕಪ್ಪೆಯ ಹಾಗಿದ್ದೀಯೆ. ಈಗ ನೀನು ವಿಶಾಲ ಸಮುದ್ರಕ್ಕೆ ಹೋಗುವೆ.''

ತಮ್ಮ ಗುರುಗಳ ಆಶೀರ್ವಾದದೊಂದಿಗೆ ಆಕೆ ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನವನ್ನು ಸೇರಿಕೊಂಡಳು. (ಆಗ ಅದು 'ಶಿಶುಮಂಗಲ್ ಪ್ರತಿಷ್ಠಾನ'ವೆಂದೇ ಜನಪ್ರಿಯವಾಗಿತ್ತು). ೧೯೬೨ರ ಸೆಪ್ಟೆಂಬರ್ ೧ ರಂದು ತನ್ನ ೨೮ನೇ ವಯಸ್ಸಿನಲ್ಲಿ ಆಕೆ ಅಲ್ಲಿ ಸೇರಿಕೊಂಡಳು.

ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನವು ಸ್ವಾಮಿ ದಯಾನಂದರ ಜೀವಂತ ಸ್ಮಾರಕ ಸ್ತಂಭವಾಗಿದೆ. (ಅವರು ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದ ಶಿಷ್ಯರು; ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ನಿನ ೯ನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಮಾಧವಾನಂದರ ತಮ್ಮ ಕೂಡ ಆಗಿದ್ದರು) ಅವರು ಜನರ ಆರೋಗ್ಯವನ್ನು ಉತ್ತಮಗೊಳಿಸುವಲ್ಲಿ – ವಿಶೇಷವಾಗಿ ತಾಯಂದಿರ ಹಾಗೂ ಮಕ್ಕಳ ಆರೋಗ್ಯವನ್ನು – ಅಸಾಧಾರಣ ಶ್ರಮವಹಿಸಿ ದುಡಿದಿದ್ದರು. ಅದರ ಬಗ್ಗೆ ಎಲ್ಲರೂ ಅಪಾರ ಗೌರವ, ಕೃತಜ್ಞತೆಗಳನ್ನು ಹೊಂದಿದ್ದರು.

ಆಕೆಯ ಪೂರ್ಣ ಹೆಸರು ಗಾಯತ್ರಿ ಕಲ್ಯಾಣಿ ಎಂದು. ೧೯೩೪ರ ಆಗಸ್ಟ್ ೭ರಂದು ಅವಳು ಶ್ರೀರಾಮಕೃಷ್ಣರ ಭಕ್ತರ ಕುಟುಂಬದಲ್ಲಿ ಜನಿಸಿದಳು. ಈ ಹಿಂದೆಯೇ ಹೇಳಿದಂತೆ, ಅವರ ಅಜ್ಜಂದಿರು (ಪ್ರಸಿದ್ಧ ತಂಬಿ ಸಹೋದರರು) ೨೦ನೇ ಶತಮಾನದ ಆರಂಭದಲ್ಲಿ ತಿರುವನಂತಪುರದ ಶ್ರೀರಾಮಕೃಷ್ಣ ಆಶ್ರಮದ ಪೋಷಕರಾಗಿದ್ದರು. ತಿರುವನಂತಪುರ ಆಶ್ರಮವು ಆರಂಭವಾದದ್ದು ೧೯೧೬ರಲ್ಲಿ. ಕಲ್ಯಾಣಿಯ ಸೋದರಮಾವ ಡಾ. (ಪ್ರೊ.) ಕೇಶವನ್ ನಾಯರ್ ಅವರು ಕೇರಳರಾಜ್ಯದ ಮೊದಲ ಸಿವಿಲ್ ಸರ್ಜನ್ ಆಗಿದ್ದರು; ತಿರುವನಂತಪುರ ಮೆಡಿಕಲ್ ಕಾಲೇಜಿನಲ್ಲಿ ಶಸ್ತ್ರಚಿಕಿತ್ಸೆ ವಿಭಾಗದಲ್ಲಿ ಪ್ರೊಫೆಸರ್ ಆಗಿದ್ದರು. ಡಾ (ಪ್ರೊ.) ಕೇಶವನ್ ನಾಯರ್ ಹಾಗೂ ಡಾ. ಸಿ.ಒ. ಕರುಣಾಕರನ್ ಅವರು ಕೇರಳದಲ್ಲಿ ಮೊದಲ ಮೆಡಿಕಲ್ ಕಾಲೇಜಿನ ಸಂಸ್ಥಾಪಕರಾಗಿದ್ದರು.

ಸ್ವಾಮಿ ರಾಮಕೃಷ್ಣಾನಂದಜಿ, ಬ್ರಹ್ಮಾನಂದಜಿ, ನಿರ್ಮಲಾನಂದಜಿ ಹಾಗೂ ಇನ್ನಿತರ ಹಿರಿಯ ಸಂನ್ಯಾಸಿಗಳು ಕಲ್ಯಾಣಿಯ ಮನೆಗೆ ಭೇಟಿ ನೀಡಿ, ಆ ಮನೆಯನ್ನು ಪವಿತ್ರಗೊಳಿಸಿದ್ದರು. ಅವಳ ಮನೆಯಲ್ಲಿ ಸ್ವಾಮಿ ಬ್ರಹ್ಮಾನಂದರು ಕುಳಿತಿದ್ದ ಒಂದು ಕುರ್ಚಿಯಿತ್ತು. ಅತ್ಯಂತ ಪವಿತ್ರವೆಂದು ಭಾವಿಸಿ, ಅದನ್ನು ಯಾರೂ ಬಳಸುತ್ತಿರಲಿಲ್ಲ. ಅದನ್ನು 'ಮಹಾನ್ ಆರಾಮ ಖುರ್ಚಿ' ಎಂದು ಕರೆಯುತ್ತಿದ್ದರು. ಮನೆಗೆ ಭೇಟಿಯಿತ್ತ ಹಾಗೂ ಅಲ್ಲಿ ತಂಗಿದ್ದ ಶ್ರೇಷ್ಠ ಸಂನ್ಯಾಸಿಗಳ ಕಥೆಗಳನ್ನು ಕೇಳಿ ಕಲ್ಯಾಣಿ ಅಚ್ಚರಿಪಡುತ್ತಿದ್ದಳು.

ದೈವೀಲೀಲೆ ಎಂಬುದೇ ಆಶ್ಚರ್ಯವಾದುದು. ಸ್ವಾಮಿ ದಯಾನಂದರು ೧೯೩೧ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಿಂದ ಮರಳಿ ಬಂದು ಕೇರಳಕ್ಕೆ ಹೋಗಿ, ಅಲ್ಲಿ ಕಲ್ಯಾಣಿಯ ಮನೆಯಲ್ಲಿ ಕೆಲವು ದಿನ ತಂಗಿದ್ದರು. ಆಗಿನ್ನೂ ಕಲ್ಯಾಣಿ ಜನಿಸಿರಲಿಲ್ಲ. ೧೯೩೨ರಲ್ಲಿ ಸ್ವಾಮಿ ದಯಾನಂದರು 'ಶಿಶುಮಂಗಲ' ಅಥವಾ ಈಗಿನ ಸೇವಾ ಪ್ರತಿಷ್ಠಾನವನ್ನು ಸ್ಥಾಪಿಸಿದರು. ಕಲ್ಯಾಣಿ ಮಗುವಾಗಿದ್ದಾಗಿನಿಂದಲೇ ಸ್ವಾಮಿ ದಯಾನಂದರ ಅಸಾಧಾರಣ ಗುಣಗಳ ಬಗ್ಗೆ ಹಲವು ಬಾರಿ